ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನನಗೆ ಒಂದು ಅನುಮಾನ ಬಂದಿದೆ. ಅವು ಯಾವ ವೃತ್ತ ಪತ್ರಿಕೆಗಳು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : ಅವರು ಕೊಟ್ಟಿರತಕ್ಕದ್ದು ಜೆರಾಕ್ಸ್ ಪ್ರತಿಗಳು. ವೃತ್ತ ಪತ್ರಿಕೆಗಳು ಎಂದರೆ ವಾರಪತ್ರಿಕೆ ಮತ್ತು ಲಂಕೇಶ್ ಪತ್ರಿಕೆ.

ಶ್ರೀ ಹೆಚ್.ಡಿ. ದೇವೇಗೌಡ : ತಾವು ತಾರೀಖಿನ್ನು ಹೇಳಿದರೆ ಒಳ್ಳೆಯದು. ಏಕೆಂದರೆ, ನಮ್ಮ ಜನತಾ ಸಂದರ್ಶನ ಶುರುವಾದುದು 3ನೇ ತಾರೀಖಿನಿಂದ

ಅಧ್ಯಕ್ಷರು : ಕೊಡುತ್ತೇನೆ. ಈಗ ಇನ್ನೊಂದು ರೂಲಿಂಗ್ ಇದೆ.

ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರ ಮೇಲೆ ಮಾಡಿರುವ ಅಪಾದನೆಗಳು.

ದಿನಾಂಕ 08-08-1995 ರಂದು ಶ್ರೀ ದೇವೇಗೌಡರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯ ಸೂಚನೆಯ ಬಗ್ಗೆ ವಿರೋಧ ಪಕ್ಷದ ಸನ್ಮಾನ್ಯ ನಾಯಕರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾತನಾಡುತ್ತಾ, ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರಾದ ಶ್ರೀ ಆರ್. ರೋಷನ್ ಬೇಗ್ ಅವರ ವಿರುದ್ಧ ಕೆಲವೊಂದು ಗಂಭೀರವಾದ ಅಪಾದನೆಗಳನ್ನು ಮಾಡಿದರು. ಕಿಮಿನಲ್ ಹಿನ್ನಲೆ ಹೊಂದಿರುವರೆಂದು ಆರೋಪಿಸಲಾಗಿರುವ ವ್ಯಕ್ತಿಗಳೊಂದಿಗೆ ಶ್ರೀ ಆರ್. ರೋಷನ್ ಬೇಗ್ ಅವರು ನಿಕಟ ಸಂಪರ್ಕ ಹೊಂದಿದ್ದರೆಂಬುತದೇ ಆರೋಪದ ಪ್ರಧಾನ ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಆರ್. ರೋಷನ್ ಬೆ ಗ್ ಅವರ ವಿರುದ್ಧ ಮಾಡಲಾದ ಆಪಾದನೆಗಳನ್ನು ಸಮರ್ಥಿಸುತ್ತಾ ವಿಡಿಯೋ ಕ್ಯಾಸೇಟ್ಟೊಂದನ್ನು ಸಹ ನನಗೆ ಕಳುಹಿಸಿ ಕೊಟ್ಟಿರುತ್ತಾರೆ.

ವಿಧಾನ ಸಭೆಯ ವಿರೋಧ ಪಕ್ಷದ ಸನ್ಮಾನ್ಯ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೀಡಿದ ವಿಡಿಯೋ ಕ್ಯಾಸೇಟ್ಟನ್ನು ನಾನು ಖುದ್ದೀಗಿ ನೋಡಿದ್ದೇನೇ. ಈ ಕ್ಯಾಸೆಟ್, ಎಸ್.ಟಿ.ಡಿ : ಐ.ಎಸ್.ಡಿ. ಬೂತೊಂದರ ಉದ್ಘಾಟನಾ ಸಮಾರಂಭವೊಂದಕ್ಕೆ ಸಂಬಂಧಿಸಿದ್ದಾಗಿದೆ. ಶ್ರೀಮತಿ ಮತ್ತು ಶ್ರೀ ಅಹಮದ್‌ರವರ ಹೆಸರಿನಲ್ಲಿ ಕಟ್ಟಿರುವ ಬ್ಯಾನರ್‌ಗಳು ಇವೆ. ಕ್ಯಾಸೆಟ್‌ನಲ್ಲಿ, ತೋರಿಸಿರುವಂತೆ ಸಮಾಜ್ ಮಾಡಲಿಕ್ಕಾಗಿ ಬಹು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಂಡಿರುವುದಲ್ಲದೆ ಇತರ ಅನೇಕ ಅತಿಥಿಗಳು ಸಹ ಆಹ್ವಾನಿತಗೊಂಡಿರುವುದು ಇಡೀ ಕ್ಯಾಸೆಟ್ ಅನ್ನು ವೀಕ್ಷಿಸಿದಾಗ ತಿಳಿದು ಬರುತ್ತದೆ.

ನನಗೆ ವೈಯಕ್ತಿಕವಾಗಿ ಚೆನ್ನಾಗಿ ಗೊತ್ತಿರುವ ಮೂರು ಮಂದಿ ಗಣ್ಯ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಅಂಶವನ್ನು ಉಲ್ಲೇಖಿಸಬಯಸುತ್ತೇನೆ.

1. ಶ್ರೀ ರಾಜಣ್ಣ ಪ್ರಸ್ತುತ ಸದನದ ಸನ್ಮಾನ್ಯ ಸದಸ್ಯರು, ಭಾರತಿ ನಗರ ಮತ ಕ್ಷೇತ್ರದಿಂದ ಪ್ರತಿನಿಧಿತದರು, ಜನತಾ ದಳ ಪಕ್ಷ.
2. ಶ್ರೀ ವೆಂಕಟಲಕ್ಷ್ಮಯ್ಯ, ಬೆಂಗಳೂರು ನಗರದ ಮಾಜಿ ಕಾರ್ಪೋರೇರ್ಟರ್, ಬಿಜೆ.ಪಿ. ಪಕ್ಷ ಪ್ರತಿನಿಧಿತರು.
3. ಶ್ರೀ ಆರ್. ರೋಷನ್ ಬೇಗ್ ಸನ್ಮಾನ್ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರು.

ನಾನು ನೋಡಿದ ಹಾಗೆ ಈ ಕ್ಯಾಸೆಟ್‌ನಲ್ಲಿ, ಕಾರ್ಯ್‌ಕ್ರಮದ ಸ್ಥಳಕ್ಕೆ ಆಗಮಿಸಿ ಪರಸ್ಪರ ಅಭಿನಂದನೆಗಳನ್ನು ವಿನಿಮಯ ಮಾಡಿಕೊಂಡದ್ದಕ್ಕಷ್ಟೇ ಈ ಮೂವರು ಗಣ್ಯರ ಪಾತ್ರ ಸೀಮಿತವಾಗಿದೆ. ಅಷ್ಟೇ ಹೊರತು ಬೇರೇನೂ ಇಲ್ಲ. ಕೇವಲ ಈ

ವಿಷಯಗಳನ್ನು ಆಧರಿಸಿ ಯಾವುದೇ ರೀತಿಯ ಕಾಲ್ಪನಿಕ ಕಥೆ ಕಟ್ಟಿ ಆರೋಪ ಹೊರಿಸುವುದು ಸರ್ವಥಾ ಸರಿಯಲ್ಲ.

ಸಾರ್ವಜನಿಕ ಜೀವನದೊಂದಿಗೆ ಬೆರೆತ ವ್ಯಕ್ತಿಗಳು ಅನೇಕ ಸನ್ನಿವೇಶಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಹಿಂದೆ ಸ್ವೀಕರಿಸಿರುತ್ತಾರೆ ಹಾಗೂ ಇನ್ನು ಮುಂದೆ ಸಹ ಕೆಲವು ಸಂದರ್ಭಗಳಲ್ಲಿ ಆಹ್ವಾನ ಪತ್ರಿಕೆಗಳಿಗೆ ಮನ್ನಣೆ ನೀಡಬೇಕಾಗುತ್ತದೆ. (ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಪಾಲ್ಗೊಂಡ ಸಮಯದಲ್ಲಿ ಕೆಟ್ಟ ನಡವಳಿಕೆಯನ್ನು ಹೊಂದಿರುವುದಾಗಿ ಆರೋಪಿಸಲಾಗಿರುವ ವ್ಯಕ್ತಿಗಳ ಹಾಜರಿರುವಿಕೆಯಿಂದ ಮಾತ್ರವಾಗಿ; ಅಂಥ ಸಾರ್ವಜನಿಕ ವ್ಯಕ್ತಿಗಳು, ವಿಚಿದ್ರಕಾರಿ ಹಿನ್ನೆಲೆ ಹೊಂದಿರುವರೆಂದು, ಆರೋಪಿಸಲಾಗಿರುವ ವ್ಯಕ್ತಿಗಳೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆಂಬ, ಕೇವಲ ಕಾರಣದಿಂದಾಗಿ ಶ್ರೀ ರೋಷನ್ ಬೇಗ್‌ರವರು ಇಂತಹ ವ್ಯಕ್ತಿಯ ನಡವಳಿಕೆಗೆ ಉತ್ತೇಜನ ನೀಡಿದರೆಂದು ಆರೋಪಿಸುವುದು ಸಾಧುವಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಈ ಸದನದ ಯಾರೇ ಗೌರವಾನ್ವಿತ ಸದಸ್ಯರ ವಿರುದ್ಧ ಆರೋಪಗಳನ್ನು ಮಾಡುವಾಗ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಹಾಗೂ ಅತ್ಯಂತ ಜಾಗರೂಕತೆಯಿಂದ ಪರೀಕ್ಷೆಗೆ ಒಳಪಡಿಸಬೇಕೆಂಬುದು ನನ್ನ ಮನಃಪೂರ್ವಕ ಅಪೇಕ್ಷೆ. ಈ ರೀತಿ ಕಟ್ಟುಪಾಡುಗಳನ್ನು ಸದಸ್ಯರು ಪಾಲಿಸದಿದ್ದಲ್ಲಿ ವಿಷಯಕ್ಕೊಳಪಟ್ಟ ಸದಸ್ಯರ ಚಾರಿತ್ರ್ಯವಧೆಯನ್ನು ತಿಳಿದೂ ತಿಳಿದಂತೆ ಮಾಡಲು ಪ್ರಯತ್ನಿಸಿದಂತಾಗುತ್ತದೆಂಬುದು ವ್ಯಕ್ತವಾಗುತ್ತದೆ. ಇಂತಹ ಕ್ರಮ ಸರ್ವಥಾ ಅಪೇಕ್ಷಣೆಯವಲ್ಲ ಹಾಗೂ ಸಾಧುವಲ್ಲ.

ಶ್ರೀ ಯಡಿಯೂರಪ್ಪ : ಪೊಟೋದು ಹೇಳಿಲಿಲ್ಲ. ಪೊಟೋದು ನೆಗೆಟಿವ್ಸ್ ಕೊಟ್ಟಿಲ್ಲ ಆದ್ದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೆಗೆಟೀವ್ಸ್ ಕೊಡಬೇಕು ಪೊಟೋಸ್‌ದು. ತಾವು ದಿನಾಂಕವನ್ನು ಕೇಳಿದ್ದೀರಿ ಲಂಕೇಶ್ ಪತ್ರಿಕೆದು ಜುಲೈ 5ನೇ ತಾರೀಖು 1995. ವಾರಪತ್ರಿಕೆದು ದಿನಾಂಕ ಕಾಣುತ್ತಾ ಇಲ್ಲ, ಬೇಕಾದರೆ ಕಳುಹಿಸಿಕೊಡುತ್ತೇನೆ. ನಮ್ಮ ಆಫೀಸ್‌ನಿಂದ ಸನ್ಯಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಶುರು ಮಾಡಬಹುದು.

ಅವಿಶ್ವಾಸ ನಿರ್ಣಯದ ಬಗ್ಗೆ ಮುಖ್ಯಮಂತ್ರಿಗಳ ಉತ್ತರ

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಯಾನ್ಯ ಅಧ್ಯಕ್ಷರೇ, ನಿನ್ನೆ ದಿನಾಂಕ 7ನೇ ತಾರೀಖು ಈ ಸಭೆಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಈ ಸರ್ಕಾರದಲ್ಲಿ ದೇವೇಗೌಡರ ನಾಯಕತ್ವದ ಈ ಸರ್ಕಾರದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ ಎನ್ನುವ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಈ ಅವಿಶ್ವಾಸ ನಿರ್ಣಯದ ಮೇಲೆ ಸುಮಾರು 13ಗಂಟೆಗಳ ಕಾಲ ಚರ್ಚೆಯಾಗಿದೆ. 13ಗಂಟೆ 45ನಿಮಿಷ, 14 ಗೌರವಾನ್ವಿತ ಸದಸ್ಯರುಗಳು ಸುಮಾರು ಈ ಸದನದಲ್ಲಿ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥದ್ದಕ್ಕೆ ನಾನು ಅಭಿನಂದಿಸುತ್ತೇನೆ. ಈ ಸರ್ಕಾರ ಡಿಸೆಂಬರ್ 11ನೇ ತಾರೀಖು ಈ ರಾಜ್ಯದ ಜನತೆಯ ಒಂದು ಅಣತಿಯ ಮೇಲೆ ಅಧಿಕಾರಕ್ಕೆ ಬಂತು. ದಿನಾಂಕ 27 ಮಾರ್ಚ್ 95 ಕೇವಲ ಮೂರು ತಿಂಗಳಲ್ಲಿ ಅವರು ಭಾಷಣ ಮಾಡಿದ್ದಾರೆ ಏನೆಂದರೆ ನಮಗೆ ಈಗಾಗಲೇ ಸಾಕಷ್ಟು ಪುರಾವೆಗಳು ಬರುತ್ತಿವೆ., ಜನರು ನಿಮ್ಮನ್ನು ನಂಬಿ ಅಧಿಕಾರ ಕೊಟ್ಟಿರತಕ್ಕಂತಹ ಸಂದರ್ಭದಲ್ಲಿ ಒಂದು ರಾಜಕೀಯ ಅಸ್ಥಿರತೆ, ವ್ಯಾಪಕವಾಗಿ ಭ್ರಷ್ಟಾಚಾರ, ಆರ್ಥಿಕ ದಿವಾಳಿತನದಿಂದ ಜನ ಕಂಗಾಲಾಗಿದ್ದಾರೆ ಉಸಿರು ಕಟ್ಟುವಂತಹ ಪರಿಸ್ಥಿತಿ